ಧಾರವಾಡ ಬಳಿ ಅರಣ್ಯ ಕಾಲೇಜು ಸ್ಥಾಪನೆ.

೭೪ ಶ್ರೀ ಎಸ್. ಆರ್. ಮೋರೆ (ಧಾರವಾಡ).— ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ. —

(ಅ) ಧಾರವಾಡ ಹತ್ತಿರ ಸ್ಥಾಪಿಸಬೇಕೆಂದಿರುವ ಅರಣ್ಯ ಕಾಲೇಜು ಈಗ ಯಾವ ಹಂತದಲ್ಲಿದೆ:

(ಆ) ಈ ಬಗ್ಗೆ ಕೆಲವು ಜಮೀನುಗಳನ್ನು ಖರೀದಿಸಲಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ :

(ಇ) ಇದಕ್ಕೆ ಬೇಕಾದ ಶಾಸ್ತ್ರೀಯ ಹಾಗೂ ನೈಸರ್ಗಿಕ ಹಿನ್ನೆಲೆಯು ಧಾರವಾಡ ನಗರಕ್ಕೆ ಇದೆ ಎಂಬುದು ಸರಕಾರದವರ ಗಮನದಲ್ಲಿದೆಯೇ ?*

* * *

ಜನತಾ ಹಾಗೂ ಹುಡ್ಕೊ ಯೋಜನೆ ಮೇರೆಗೆ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ನಿರ್ಮಿಸಿರುವ ಮನೆಗಳು.

೭೫. ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ).— ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ .—

(ಅ) ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಬಡವರಿಗಾಗಿ ಜನತಾ ಮತ್ತು ಹುಡ್ಕೋ ಯೋಜನೆಗಳಲ್ಲಿ ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು?

(ಆ) ಅವುಗಳಲ್ಲಿ ಈಗಾಗಲೇ ಶಿಥಿಲವಾಗಿರುವ ಮನೆಗಳ ಸಂಖ್ಯೆ ಎಷ್ಟು ?

(ಇ) ಈ ಮನೆಗಳು ಬಹುಬೇಗ ಬಿದ್ದು ಹೋಗಲು ಕಾರಣಗಳೇನು ?

(ಈ) ಕಾರ್ಮಿಕರು ಸ್ವಂತವಾಗಿ ಕಟ್ಟಬೇಕೆಂಬ ಸರಕಾರದ ಆಜ್ಞೆಯಿಂದ ತೊಂದರೆಯನ್ನು ಸರಕಾರ ಗಮನಿಸಿದೆಯೇ ,

(ಉ) ಗಮನಿಸಿದ್ದರೆ ಸರಕಾರವೇ ಕಂಟ್ರಾಕ್ಟರುಗಳ ಮುಖಾಂತರ ಬಡವರಿಗೆ ಮನೆಗಳನ್ನು ಕಟ್ಟಲು ಕಾರ್ಯಕ್ರಮ ಹಾಕಿದೆಯೇ ,

* * *

ಬಳ್ಳಾರಿ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹೈದ್ರಾಬಾದ್ ವೇತನ ಶ್ರೇಣಿಯನ್ನು ನೀಡಿರುವುದು.

೭೬ ಶ್ರೀ ಕೆ. ಚನ್ನಬಸವನ ಗೌಡ (ಕೂಡ್ಲಗಿ).— ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಬಳ್ಳಾರಿ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ೧೯೫೬ಕ್ಕಿಂತ ಹಿಂದೆ ಇದ್ದ ಎಲ್ಲಾ ಶಿಕ್ಷಕರಿಗೂ ಮತ್ತು ೧೯೬೯ಕ್ಕಿಂತ ಹಿಂದೆ ಇದ್ದ ಕೆಲವು ಶಿಕ್ಷಕರಿಗೂ ಹೈದರಾಬಾದ್ ವೇತನವನ್ನು ಕೊಟ್ಟಿರುವುದು ನಿಜವಲ್ಲವೆ ,

(ಆ) ೮೦ ಪರ್‌ಸೆಂಟ್ ಶಿಕ್ಷಕರು ಹೈದರಾಬಾದ್ ವೇತನ ಶ್ರೇಣಿಯನ್ನು ಪಡೆದಿದ್ದು ಇನ್ನುಳಿದ ೨೦ ಪರ್‌ಸೆಂಟ್ ಶಿಕ್ಷಕರಿಗೇಕೆ ಈ ಅನುಕೂಲತೆಯನ್ನು ಕೊಡಬಾರದು.

(ಇ) ಅವರಿಗೂ ಹೈದರಾಬಾದ್ ವೇತನ ಶ್ರೇಣಿ ಕೊಡುವುದರ ಬಗ್ಗೆ ಸರಕಾರದ ಕ್ರಮಗಳೇನು ,

* * *

* Reply not received.